[صحيح] [رواه البخاري]

ಕೈಯಿಂದ ಸರಿಯಾದುದನ್ನು ಮಾಡುವಂತೆ ಮಾಡುತ್ತಾನೆ. ಇದರಿಂದ ದಾಸನು ಅಲ್ಲಾಹು ಸಂತೃಪ್ತನಾಗುವ ವಿಷಯವನ್ನು ಹೊರತುಪಡಿಸಿ ಬೇರೇನೂ ಮಾಡುವುದಿಲ್ಲ. ದಾಸನು ತನ್ನ ಕಾಲಿನಿಂದ ಸರಿಯಾದುದರ ಕಡೆಗೆ ನಡೆಯುವಂತೆ ಮಾಡುತ್ತಾನೆ. ಇದರಿಂದ ದಾಸನು ಅಲ್ಲಾಹು ಸಂತೃಪ್ತನಾಗುವ ವಿಷಯವನ್ನು ಹೊರತುಪಡಿಸಿ ಬೇರೆಲ್ಲಿಗೂ ನಡೆಯುವುದಿಲ್ಲ, ಒಳಿತಿನ ಕಾರ್ಯಗಳ ಕಡೆಗಲ್ಲದೆ ಬೇರೆಲ್ಲಿಗೂ ಓಡುವುದಿಲ್ಲ. ಇದರೊಂದಿಗೆ, ಒಂದು ವೇಳೆ ಅವನು ಅಲ್ಲಾಹನಲ್ಲಿ ಏನನ್ನಾದರೂ ಕೇಳಿದರೆ, ಅಲ್ಲಾಹು ಅವನು ಕೇಳಿದ್ದನ್ನು ಅವನಿಗೆ ನೀಡುತ್ತಾನೆ. ಆಗ ಅವನು ಪ್ರಾರ್ಥನೆಗಳು ಸ್ವೀಕರಿಸಲ್ಪಡುವ ವ್ಯಕ್ತಿಯಾಗುತ್ತಾನೆ. ಒಂದು ವೇಳೆ ಅವನು ರಕ್ಷಣೆಗಾಗಿ ಅಲ್ಲಾಹನಲ್ಲಿ ಅಭಯ ಕೋರಿದರೆ ಮತ್ತು ಅವನ ಮೊರೆ ಹೋದರೆ, ಸರ್ವಶಕ್ತನಾದ ಅಲ್ಲಾಹು ಅವನಿಗೆ ಅಭಯ ನೀಡುತ್ತಾನೆ ಮತ್ತು ಅವನು ಭಯಪಡುವ ವಿಷಯದಿಂದ ಅವನನ್ನು ರಕ್ಷಿಸುತ್ತಾನೆ.

http://www.sunnah.global/hadeeth/kn/show/66534